| | |
|---|---|
| ಪ್ರಾಸಾ | 06 |
| ಚಾಸಾ | 05 |

ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ: 4/2024**

ಸಾಕ್ಷಿಗೆ ತೆಲುಗು ಮಾತ್ರ ಬರುತ್ತಿದ್ದರಿಂದ ವಕೀಲರಾದ ಶ್ರೀ. ಪ್ರತಾಪ್ ರೋಲ್ ನಂ: **KAR- 3403/2025** ರವರನ್ನು ಸಾಕ್ಷಿ ವಿಚಾರಣೆಯಲ್ಲಿ ಕನ್ನಡಕ್ಕೆ ತರ್ಜುಮೆ ಮಾಡಲು ನೇಮಿಸಿಕೊಂಡಿರುತ್ತದೆ. ಸದರಿ ವಕೀಲರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸದರಿ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಗೆ ತರ್ಜುಮೆದಾರರ ಮುಖಾಂತರ ತೆಲುಗು ಭಾಷೆಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಮೂರ್ತಿ |
| ತಂದೆಯ ಹೆಸರು | : | ಲೇಟ್. ಚಿನ್ನಪ್ಪ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸಸ್ಥಳ | : | ಚಿಕ್ಕಕಿರುಗಂಬಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಚಾಸಾ-1 ರಿಂದ ಚಾಸಾ-4, ಚಾಸಾ-7 ರಿಂದ ಚಾಸಾ- 9 ರವರ ಪರಿಚಯ ಇದೆ. ಚಾಸಾ-6 ಮತ್ತು ಚಾಸಾ-10 ರವರ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯ ಪರಿಚಯ ಇದೆ, 2 ನೇ ಆರೋಪಿಯ

| | |
|---|---|
| ಪ್ರಾಸಾ | 06 |
| ಚಾಸಾ | 05 |

ಪರಿಚಯ ಇರುವುದಿಲ್ಲ.

2. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ನಾನು ಊರಿನಲ್ಲಿ ಇರಲಿಲ್ಲ. ನಾನು ಗಾರೆ ಕೆಲಸಕ್ಕೆ ಒಮ್ಮೆ ಹೋದರೆ 15 ದಿವಸಕ್ಕೆ ವಾಪಸ್ಸು ಬರುತ್ತೇನೆ. ಚಾಸಾ-2 ಮತ್ತು ಚಾಸಾ-5 ರವರು ರಾಮಚಂದ್ರರವರ ಮನೆಯ ಬಳಿ ಹೋಗುತ್ತಿದ್ದಾಗ ಆರೋಪಿ ಮತ್ತು ದೂರುದಾರರ ಮಧ್ಯೆ ಗಲಾಟೆಯಗುತ್ತಿದುದ್ದನ್ನು ನಾನು ನೋಡಿದ್ದೇನೆಂದು ಹಾಗೂ ಗಲಾಟೆಯನ್ನು ಬಿಡಿಸಿದ್ದೇನೆಂದು ಪೊಲೀಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-</u>**

3. ದಿಃ 18.03.2021 ರಂದು ಸಂಜೆ 5.30 ಗಂಟೆಗೆ ನಾನು ನಮ್ಮೂರಿನ ನರಸಪ್ಪ, ಚಂದ್ರಮೂರ್ತಿ ರವರು ನಮ್ಮೂರಿನ ರಾಮಚಂದ್ರಪ್ಪರವರ ಮನೆಯ ಬಳಿ ನಿಂತಿದ್ದಾಗ ನಮ್ಮೂರಿನ ಮೂರ್ತಿ ಜಮೀನಿನಲ್ಲಿ ಕೆಲಸವನ್ನು ಮುಗಿಸಿಕೊಂಡು ಮನೆಯ ಬಳಿ ಹೋಗಲು ನಡೆದುಕೊಂಡು ಬರುತ್ತಿದ್ದೇನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮೂರಿನ ಪ್ರತಾಪ ಕೈಯಲ್ಲಿ ಮಚ್ಚನ್ನು ಹಿಡಿದುಕೊಂಡು

| | |
|---|---|
| ಪ್ರಾಸಾ | 06 |
| ಚಾಸಾ | 05 |

ಮೂರ್ತಿರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದನು, ಅಷ್ಟರಲ್ಲಿ ಗಲಾಟೆಯ ಶಬ್ದ ಕೇಳಿ ಬಂದು ನಾವು ಅಲ್ಲಿಗೆ ಹೊದೇವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮೂರ್ತಿ ನಮ್ಮನು ಏಕೆ ಬೈಯುತ್ತಿದಿದ್ದಿರಿ ಎಂದು ಪ್ರತಾಪ್ ರವರನ್ನು ಕೇಳಿದಾಗ ನೀನು ನಮ್ಮ ಅತ್ತಿಗೆ ಸವಿತಮ್ಮರವರಿಗೆ ಫೋನ್ ಮಾಡಿ ಅವರ ಜೊತೆ ಮಾತನಾಡುತ್ತೀಯಾ ಎಂದು ಹೇಳಿ ನನ್ನ ಮಗನೇ ನಿನ್ನನ್ನು ಸಾಯಿಸುತ್ತೇನೆಂದು ಕೈಯಲ್ಲಿದ್ದ ಮಚ್ಚಿನಿಂದ ಮೂರ್ತಿಯ ಎಡಭುಜಕ್ಕೆ ಹೊಡೆದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ಮೂರ್ತಿ ಎಡಕೈಯನ್ನು ಅಡ್ಡ ಇಟ್ಟಾಗ ರಕ್ತಗಾಯವಾಗಿತ್ತು ಎಂದರೆ ಸರಿಯಲ್ಲ. ಅಷ್ಟರಲ್ಲಿ ನಾವು ಮೂರು ಜನ ಅಡ್ಡ ಹೋಗಿ ಜಗಳ ಬಿಡಿಸಿ ಬೆಳಿಗ್ಗೆ ಮಾತನಾಡೋಣ ಎಂದು ಅವನಿಗೆ ಬುದ್ದಿ ಹೇಳಿ ಕರೆದುಕೊಂಡು ಹೋದೇವು ಎಂದರೆ ಸರಿಯಲ್ಲ. ಪ್ರತಾಪನು ಬರುವಾಗ ನಿನ್ನನ್ನು ಬಿಡುವುದಿಲ್ಲ, ಮತ್ತೆ ಬರುತ್ತೇನೆಂದು ಹೇಳಿ ಹೋದನು ಎಂದರೆ ಸರಿಯಲ್ಲ. ಪುನಃ ರಾತ್ರಿ ಸುಮಾರು 9.30 ಗಂಟೆ ಸಮಯದಲ್ಲಿ ಪ್ರತಾಪ ಆ ನನ್ನ ಮಗನನ್ನು ಇವತ್ತು ಬಿಡುವುದಿಲ್ಲ ಸಾಯಿಸುತ್ತೇನೆಂದು ತನ್ನ ಕೈಯಲ್ಲಿದ್ದ ಒಂದು ವಸ್ತುವನ್ನು ಎಸೆದು ಹೋದನು ಅದು ಏನೆಂದು ಕತ್ತಲಿನಲ್ಲಿ ಗೊತ್ತಾಗಲಿಲ್ಲ ಎಂದರೆ ಸರಿಯಲ್ಲ. ನಂತರ ದಿಃ 19.03.2021 ರಂದು ಬೆಃ 6.10 ಗಂಟೆ ಸಮಯದಲ್ಲಿ ಮೂರ್ತಿ ರವರ ಮನೆಯ ಮುಂದೆ ಜೊರಾದ ಶಬ್ದ ಕೇಳಿ ಬಂದಿತ್ತು

ಸತ್ರ ಪ್ರಕರಣ ಸಂಖ್ಯೆ: 4/2024

| | |
|---|---|
| ಪ್ರಾಸಾ | 06 |
| ಚಾಸಾ | 05 |

ಎಂದರೆ ಸರಿಯಲ್ಲ. ನಾನು ಅಲ್ಲಿ ಹೋಗುವಷ್ಟರಲ್ಲಿ ಮೂರ್ತಿರವರ ಸಾಕು ನಾಯಿ ಸತ್ತು ಹೋಗಿತ್ತು ಎಂದರೆ ಸರಿಯಲ್ಲ. ನಂತರ ವಿಚಾರ ತಿಳಿಯಲಾಗಿ ಪ್ರತಾಪ್ ನು ಗಂಗ್ರೆ ಕಾಲುವೆ ಆಂಜಿನಪ್ಪನ ಕಡೆಯಿಂದ ಪಡೆದುಕೊಂಡು ತನ್ನ ಶೆಡ್ಡಿನಲ್ಲಿದ್ದ ನಾಡ ಬಾಂಬ್ ನ್ನು ಎತ್ತಿಕೊಂಡು ಬಂದು ಮೂರ್ತಿರವರ ಮೇಲೆ ಹಾಕಿ ಸಾಯಿಸಲು ಬಂದಾಗ ಅವನು ಸಿಗದ ಕಾರಣ ನಾಡ ಬಾಂಬ್ ನ್ನು ಮಂಜುನಾಥ್ ರವರ ಮನೆಯ ಪಕ್ಕದಲ್ಲಿನ ಗಿಡಗಳಲ್ಲಿ ಬಿಸಾಡಿ ಹೋಗಿದ್ದನೆಂದು, ಅದನ್ನು ಮೂರ್ತಿ ರವರ ಸಾಕು ನಾಯಿ ಕಚ್ಚಲು ಪ್ರಯತ್ನಿಸಿದಾಗ ಸ್ಫೋಟಗೊಂಡು ಮರಣ ಹೊಂದಿರುವುದಾಗಿ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಮೂರ್ತಿಯು ಪ್ರತಾಪನ ಅತ್ತಿಗೆ ಫೋನ್ ನಲ್ಲಿ ಮಾತನಾಡಿಸುವ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಮಚ್ಚಿನಿಂದ ಹೊಡೆದು ಸಾಯಿಸಲು ಪ್ರಯತ್ನಿಸಿದಾಗ ಅವನು ತಪ್ಪಿಸಿಕೊಂಡನೆಂದು, ಅವನನ್ನು ಸಾಯಿಸುವ ಉದ್ದೇಶದಿಂದ ನಾಡಬಾಂಬ್ ನ್ನು ತಂದು ಅವನ ಮೇಲೆ ಹಾಕಿ ಸಾಯಿಸಲು ಪ್ರಯತ್ನ ಮಾಡಿರುವ ಪ್ರತಾಪನ ವಿರುದ್ಧ ಹಾಗೂ ಅವನಿಗೆ ಬಾಂಬ್ ನ್ನು ಕೊಟ್ಟಿರುವ ಗಂಗ್ರೆ ಕಾಲುವೆಯ ಆಂಜಿನಪ್ಪರವರ ವಿರುದ್ಧ ಕ್ರಮ ಜರುಗಿಸಬೇಕೆಂದು ಮತ್ತು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ. ದಿಃ 21.03.2021 ರಂದು " ದಿಃ 18.03.2021 ರಂದು

| | |
|---|---|
| ಪ್ರಾಸಾ | 06 |
| ಚಾಸಾ | 05 |

------------------------------------ ಪುನಃ ನೋಡಿದರೆ ಗುರುತಿಸುತ್ತೇನೆ" ಎಂದು ಈಗ ಓದಿ ಹೇಳಿದಂತೆ ನಿಪಿ 11 ರಂತೆ ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಹೆಚ್.ಸಿ.ಎಂ. ವಕೀಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ 28.01.2026 ರಂದು ತೆರೆದ ನ್ಯಾಯಾಲಯದಲ್ಲಿ ತರ್ಜುಮೆದಾರರು ಸಾಕ್ಷಿ ಹೇಳಿದ್ದನ್ನು ತರ್ಜುಮೆ ಮಾಡಿದಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**